**ಹೊಸದುರ್ಗದ ಪ್ರಧಾನ  ಸಿವಿಲ್ ಮತ್ತು ಜೆ ಎಂಎಫ್ ಸಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ**

**ಸಿ ಸಿ  ನಂ. 705/2017**

| | | | |
|---|---|---|---|
| **ಸಾಕ್ಷಿದಾರರ  ಹೆಸರು** | : | ಶಿವಣ್ಣ | ಸಿ.ಡಬ್ಲ್ಯೂ:02 |
| **ತಂದೆಯ  ಹೆಸರು** | : | ಮಲ್ಲಯ್ಯ | ಪಿ.ಡಬ್ಲ್ಯೂ:01 |
| **ವಯಸ್ಸು** | : | 52    ವರ್ಷ,  **ಪ್ರ.ವ.ಬೋ. ದಿನಾಂಕ:** | **30.08.2019.** |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ಗಂಜಿಗೆರೆ ಗ್ರಾಮ ಹೊಸದುರ್ಗ | |

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:**

1. ನನಗೆ ಈ ಪ್ರಕರಣದ ಆರೋಪಿ ಗೈರು ಹಾಜರು ಇರುವ ಮಂಜುನಾಥನ ಪರಿಚಯವಿದೆ.  ಆರೋಪಿಯನ್ನು ಗುರುತಿಸಲು ಆರೋಪಿತನ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.  ನನಗೆ ಚಾ.ಸಾ. 1, 3 ರಿಂದ 10 ರವರ ಪರಿಚಯವಿಲ್ಲ.

2. ಸಾಕ್ಷಿಯು ಒಂದು ದಾಖಲೆಯ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-01 ಎಂದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು.  ನಿಪಿ-01 ರ ಮೇಲೆ ನಾನು ಒಂದುವರೆ ವರ್ಷಗಳ ಕೆಳಗೆ ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಶ್ರೀರಾಂಪುರ ಪೊಲೀಸರು ನಿಪಿ-1 ರ ಮೇಲೆ ನನ್ನ ಸಹಿ  ಪಡೆದಿರುತ್ತಾರೆ.  ನಿಪಿ-01 ರಲ್ಲಿ ಏನು ಬರೆದಿದೆ ಎಂದು ನನಗೆ  ಗೊತ್ತಿಲ್ಲ.  ಪೊಲೀಸರು ನನಗೆ ಓದಿ ಹೇಳಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮ ಕ್ರಮ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ವಶಪಡಿಸಿಕೊಂಡಿರುವುದಿಲ್ಲ.  ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸಾಕ್ಷಿ ಅದರಲ್ಲಿ ತನ್ನ ಭಾವಚಿತ್ರ ಇರುವುದನ್ನು ನೋಡಿ ಗುರುತಿಸಿದ್ದು, ಸದರಿ ಭಾವಚಿತ್ರವನ್ನು ನಿಪಿ-02 ಎಂದು ಗುರುತಿಸಲಾಯಿತು.  ಸದರಿ ಪೋಟೋವನ್ನು ಶ್ರೀರಾಂಪುರ ಪೊಲೀಸರು ಯಾವ ಉದ್ದೇಶಕ್ಕಾಗಿ ಎಲ್ಲಿ ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.  ಪೊಲೀಸರಿಗೆ ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ.  ನಿಪಿ-01 ರ ಮೇಲೆ ಸಹಿ ಮಾಡಿದಾಗ ನನ್ನ

ಜೊತೆ ಯಾರು ಇರಲಿಲ್ಲ.

3. ಸಾಕ್ಷಿಯು ಇನ್ನೊಂದು ದಾಖಲೆಯ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-03 ಎಂದು, ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-03(ಎ) ಎಂದು ಗುರುತಿಸಲಾಯಿತು. ನಿಪಿ-03 ರ ಮೇಲೆ ನಾನು ಒಂದುವರೆ ವರ್ಷಗಳ ಕೆಳಗೆ ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಶ್ರೀರಾಂಪುರ ಪೊಲೀಸರು ನಿಪಿ-3 ರ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ-03 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಓದಿ ಹೇಳಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮ ಕ್ರಮ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ಬಿಡುಗಡೆಗೊಳಿಸಿರುವುದಿಲ್ಲ.

4. ಸಾಕ್ಷಿ 02 ಪೋಟೋಗಳಲ್ಲಿರುವ ತನ್ನ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ-04 ಮತ್ತು ನಿಪಿ-05 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಯಾರು, ಎಲ್ಲಿ, ಯಾವಾಗ, ಯಾವ ಉದ್ದೇಶಕ್ಕೆ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದಲ್ಲಿ ಏನು ಗೊತ್ತಿಲ್ಲ.

(ಸ.ಸ.ಅ ರವರು ಈ ಸಂದರ್ಭದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸದರಿ ಅವರ ಮನವಿಯನ್ನು ಪುರಸ್ಕರಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

1. ದಿಃ 30.10.2016 ರಂದು ಶ್ರೀರಾಂಪುರ ಗ್ರಾಮದಲ್ಲಿರುವ ಹಿರೇಕೆರೆಯ ಸರ್ಕಾರಿ ಜಾಗದಲ್ಲಿ ಚಾ.ಸಾ. 5 ರವರು ತೋರಿಸಿದಂತೆ ನನ್ನ ಹಾಗೂ ಚಾ.ಸಾ 03 ರವರ ಸಮಕ್ಷಮ ಈ ಪ್ರಕರಣದಲ್ಲಿ ನೆಡೆದ ಮರಳಿನ ಕಳ್ಳತನಕ್ಕೆ ಸಂಬಂಧಿಸಿದಂತೆ ಶ್ರೀರಾಂಪುರ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಪಂಚನಾಮೆಯ ಕಾಲದಲ್ಲಿ ಶ್ರೀರಾಂಪುರ ಪೊಲೀಸರು ಮರಳು ತುಂಬಿದ ಟ್ರ್ಯಾಕ್ಟರ್ ಹಾಗೂ ಟ್ರೈಲರ್ ನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ-01 ರ ಪಂಚನಾಮೆಯ ಜರುಗಿಸುತ್ತಿದ್ದ ಕಾಲದಲ್ಲಿ ನಿಪಿ-02 ನೇ ಪೋಟೋವನ್ನು ಶ್ರೀರಾಂಪುರ ಪೊಲೀಸರು ತೆಗೆಸಿರುತ್ತಾರೆಂದರೆ ಸರಿಯಲ್ಲ. ನಿಪಿ-01 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ಪೊಲೀಸರು ನನಗೆ ಓದಿ ಹೇಳಿದ ನಂತರ ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ.

2. ದಿಃ 20.12.2016 ರಂದು ಶ್ರೀರಾಂಪುರ ಪೋಲೀಸ್ ಠಾಣೆಯ ಆವರಣದಲ್ಲಿ ನಿಲ್ಲಿಸಿದ್ದ ಟ್ಯಾಕ್ಟರ್ ಹಾಗೂ ಟ್ರೈಲರ್ ನ್ನು ಪೊಲೀಸರು ನನ್ನ ಹಾಗೂ ಚಾ.ಸಾ. 10 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ನಂತರ ಅವುಗಳ ಮಾಲೀಕಳಾದ ಚಾ.ಸಾ. 8 ಗಂಗಮ್ಮನವರ ಮಧ್ಯಂತರ ವಶಕ್ಕೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಿಪಿ-03 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ಪೊಲೀಸರು ನನಗೆ ಓದಿ ಹೇಳಿದ ನಂತರ ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ನಿಪಿ-03 ರ ಪಂಚನಾಮೆಯ ಜರುಗಿಸುತ್ತಿದ್ದ ಕಾಲದಲ್ಲಿ ನಿಪಿ-04 ಮತ್ತು 05 ನೇ ಪೋಟೋಗಳನ್ನು ಶ್ರೀರಾಂಪುರ ಪೊಲೀಸರು ತೆಗೆಸಿರುತ್ತಾರೆಂದರೆ ಸರಿಯಲ್ಲ.

3. ನನಗೆ ನಿಪಿ-1 ಮತ್ತು 3 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳೂ ಗೊತ್ತಿದ್ದರೂ ಸಹ ಈ ದಿನ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಕೆ.ಎನ್.ಬಿ. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ